


Rotary

विश्वमित्रः

# ವಿಶ್ವಮಿತ್ರ
# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD
Rotary
Rtn. Francesco Arezzo
RI President 2025-26

Rtn. K. Palaksha
District Governor 2025-26

Rtn. Anand R.
President, Mob: 99800 93066

Rtn. Vishwas Y.
Secretary, Mob : 99800 63180

Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ -68 | ಸಂಚಿಕೆ -1 | ದಿನಾಂಕ : 02-07-2025


## ಅಧ್ಯಕ್ಷರ ನುಡಿ



ನನ್ನ ಪ್ರೀತಿಯ ರೋಟರಿ ಕುಟುಂಬದ ಎಲ್ಲಾ ಸದಸ್ಯರಿಗೆ ನಮಸ್ಕಾರಗಳು.

**ಇದು ಭಾಗ್ಯ...ಇದು ಭಾಗ್ಯ...ಇದು ಭಾಗ್ಯ...**

2025–26ನೇ ಸಾಲಿಗೆ ರೋಟರಿ ಕ್ಲಬ್ ಶಿವಮೊಗ್ಗ ಇದರ ಅಧ್ಯಕ್ಷನನ್ನಾಗಿ ನೀವೆಲ್ಲ ನನ್ನನ್ನು ಆಯ್ಕೆ ಮಾಡಿರುವುದು ನನಗೆ ಹೆಮ್ಮೆಯ ವಿಷಯ. ನಿಮ್ಮೆಲ್ಲರ ಜೊತೆ ಮತ್ತು ಸಹಕಾರದಿಂದ ವಿವಿಧ ಸಮಾಜಮುಖಿ ಸೇವಾ ಕಾರ್ಯಗಳನ್ನು ಈ ವರ್ಷವಿಡೀ ಮಾಡಲು ಇಚ್ಛಿಸುತ್ತೇನೆ.

ಈ ವರ್ಷದ ಧ್ಯೇಯ ವಾಕ್ಯ 'Unite For Good' ನಂತೆ ನಾವೆಲ್ಲರೂ ಒಗ್ಗಟ್ಟಿನಿಂದ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸೋಣ.

**ಹೊಸ ಚಿಗುರು ಹಳೆ ಬೇರು ಕೂಡಿರಲು ಮರಸೊಬಗು**
**ಹೊಸಯುಕ್ತಿ ಹಳೆತತ್ತ್ವದೊಡಗೂಡೆ ಧರ್ಮ**
**ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ**
**ಜಸವು ಜನಜೀವನಕೆ – ಮಂಕುತಿಮ್ಮ**

ನಮ್ಮ ರೋಟರಿ ಕ್ಲಬ್ ಶಿವಮೊಗ್ಗವು 67 ವಸಂತಗಳನ್ನು ಮುಗಿಸಿ ಅತ್ಯಂತ ಯಶಸ್ವಿ ಮತ್ತು ಗೌರವಾನ್ವಿತ ಕ್ಲಬ್ ಎಂದು ಹೆಸರುವಾಸಿಯಾಗಿದೆ. ನಮ್ಮಲ್ಲಿ ಸಾಕಷ್ಟು ಹಿರಿಯ ಅನುಭವಿ ಸದಸ್ಯರುಗಳಿದ್ದು ಇವರ ಮಾರ್ಗದರ್ಶನ ಮತ್ತು ಉತ್ಸಾಹಿ ಯುವ ಸದಸ್ಯರುಗಳು ಸೇರಿ ಇವತ್ತಿನ ವಿದ್ಯಮಾನಗಳಿಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ವಿಶೇಷ ಮತ್ತು ವಿಭಿನ್ನವಾಗಿ ಕ್ಲಬ್‌ನ್ನು ಮುನ್ನಡೆಸಲು ಇಚ್ಛಿಸುತ್ತೇನೆ.

ನನ್ನ ಅವಧಿಯಲ್ಲಿ ಸೇವಾ ಕಾರ್ಯಕ್ರಮಗಳಾದ ರಕ್ತದಾನ ಶಿಬಿರ, ಮಳೆ ನೀರು ಕೊಯ್ಲು, ಮಾಹಿತಿ ಕಾರ್ಯಾಗಾರ, ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ವಿಶೇಷ ಕಾಳಜಿ ಹಾಗೂ ನಮ್ಮ ರೋಟರಿ ಜಿಲ್ಲಾ ಯೋಜನೆಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ವಿಶೇಷ ಒತ್ತನ್ನು ಕೊಡುತ್ತೇನೆ.

ಎಲ್ಲಾ ರೋಟರಿ ಮಿತ್ರರಿಗೂ ಹೊಸ ರೋಟರಿ ವರ್ಷ 2025–26ರ ಶುಭಾಶಯಗಳನ್ನು ತಿಳಿಸುತ್ತಾ ಹಾಗೂ ಮತ್ತೊಮ್ಮೆ ನಿಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ.

ಎಲ್ಲರಿಗೂ ಹೃತ್ಪೂರ್ವಕ ವಂದನೆಗಳು.

– ರೊ. ಆರ್. ಆನಂದ್
ಅಧ್ಯಕ್ಷರು, 2025–26

## ಜಿಲ್ಲಾ ಗವರ್ನರ್‌ರವರ ಸಂದೇಶ



ಆತ್ಮೀಯ ರೋಟರಿ ಬಂಧುಗಳೇ,

ಪ್ರತಿಷ್ಠಿತ ಅಂತರಾಷ್ಟ್ರೀಯ ರೋಟರಿ ಜಿಲ್ಲೆ 3182ರ 2025–26 ನೇ ಸಾಲಿನ ಜಿಲ್ಲಾ ಗವರ್ನರ್ ಆಗಿ ಜಿಲ್ಲೆಯ ಮುಂದಾಳತ್ವ ವಹಿಸುವ ಅಪೂರ್ವ ಅವಕಾಶ ಒದಗಿಸಿಕೊಟ್ಟ ಜಿಲ್ಲೆಯ ಸಮಸ್ತ ರೋಟರಿ ಬಂಧುಗಳಿಗೆ ನನ್ನ ನಮನಗಳನ್ನು ಸಲ್ಲಿಸುತ್ತೇನೆ.

ರೋಟರಿ ಹೊಸ ವರ್ಷ 2025–26ರ ಶುಭಾಶಯಗಳು. ಈ ವರ್ಷದ ಅಂತರಾಷ್ಟ್ರೀಯ ಅಧ್ಯಕ್ಷರು ನೀಡಿರುವ ಧ್ಯೇಯ ವಾಕ್ಯ **'ಯುನೈಟ್ ಫಾರ್ ಗುಡ್'** ಎಂಬಂತೆ ನಾವೆಲ್ಲರೂ ಒಟ್ಟಾಗಿ ಸೇರಿ ರೋಟರಿಯ ಕಾರ್ಯವನ್ನು ಮಾಡೋಣ.

ಪ್ರತಿಯೊಬ್ಬ ರೋಟರಿ ಸದಸ್ಯರು ವಿಶೇಷ ಸಾಮರ್ಥ್ಯ ಹೊಂದಿದ್ದು ರೋಟರಿ ಸಂಸ್ಥೆಯ ಕಾರ್ಯ ಚಟುವಟಿಕೆಗಳ ಮೂಲಕ ಜನರಲ್ಲಿ ಭರವಸೆ ಮೂಡಿಸಿ ವಿಶ್ವಶಾಂತಿಗಾಗಿ ಶ್ರಮಿಸೋಣ.

ರೋಟರ‍್ಯಾಕ್ಟ್ ಕ್ಲಬ್ ಸದಸ್ಯರು ಮತ್ತು ಇಂಟರ‍್ಯಾಕ್ಟ್ ಕ್ಲಬ್ ಸದಸ್ಯರು ನಮ್ಮ ಉತ್ತಮ ಪಾಲುದಾರರಾಗಿರುತ್ತಾರೆ. ನಾವೆಲ್ಲ ಒಟ್ಟಾಗಿ ಕೈಜೋಡಿಸಿ ಕಾರ್ಯನಿರ್ವಹಿಸೋಣ. ಈ ಮೂಲಕ ರೋಟರಿ ಗೌರವ ಜನಪ್ರಿಯತೆ ಹೆಚ್ಚಿಸೋಣ. ಅವಕಾಶ ವಂಚಿತರಿಗೆ ಸಹಾಯ ಮಾಡುವ ಮೂಲಕ ಜಗತ್ತಿನಲ್ಲಿ ಅರ್ಥಪೂರ್ಣ ಬದಲಾವಣೆ ತರಲು ಪ್ರಯತ್ನಿಸೋಣ.

**ಈ ವರ್ಷದಲ್ಲಿ ನಾಲ್ಕು ಜಿಲ್ಲಾ ಯೋಜನೆಗಳನ್ನು ಸಂಕಲ್ಪಿಸಲಾಗಿದೆ.**

**1. ಆರೋಗ್ಯ** **2. ಶಿಕ್ಷಣ**
**3. ಪರಿಸರ** **4. ರಸ್ತೆ ಸುರಕ್ಷತೆ.**

ಎಲ್ಲಾ ಕ್ಲಬ್‌ಗಳು ಮೇಲಿನ ಯೋಜನೆಗಳ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಶಿಕ್ಷಕರ ಸಬಲೀಕರಣ, ವೃತ್ತಿ ಮಾರ್ಗದರ್ಶನ, ಮರಗಳನ್ನು ಬೆಳೆಸುವುದು, ತ್ಯಾಜ್ಯ ವಸ್ತುಗಳ ವೈಜ್ಞಾನಿಕ ನಿರ್ವಹಣೆ,

2ನೇ ಪುಟಕ್ಕೆ

### ಪ್ರಥಮ ವಾರದ ಸಭೆ

**ದಿನಾಂಕ: 09-07-2025 ಬುಧವಾರ** **ಸಂಜೆ 6:45 ಗಂಟೆಗೆ**

**ವಿದ್ವಾನ್ ಶ್ರೀ ಲಕ್ಷ್ಮೀನಾರಾಯಣ ಭಟ್**

ಇವರಿಂದ

**ಶುಭ ನುಡಿ**

**ಸ್ಥಳ : ರೋಟರಿ ಯುವಕೇಂದ್ರ, ಸವಳಂಗ ರಸ್ತೆ, ಶಿವಮೊಗ್ಗ**

## ಜಿಲ್ಲಾ ಗವರ್ನರ್‌ರವರ ಸಂದೇಶ 1ನೇ ಪುಟದಿಂದ...

ಕೆರೆಗಳ ಪುನಶ್ಚೇತನ, ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವುದು ಮತ್ತು ನಿರ್ವಹಿಸುವಿಕೆ, ಕ್ಯಾನ್ಸರ್‌ಗಳ ಬಗ್ಗೆ ಮಾಹಿತಿ ಮತ್ತು ರಸ್ತೆ ಚಾಲಕರ ಸುರಕ್ಷತೆಗಾಗಿ ಕಾರ್ಯಕ್ರಮಗಳು ಹಾಗು ಮಕ್ಕಳಲ್ಲಿ ಒಂದು ನಿಮಿಷ ವಿಡಿಯೋ ನಿರ್ಮಾಣ ಸ್ಪರ್ಧೆ, ಎಲ್ಲಾ ಜಿಲ್ಲಾ ಯೋಜನೆಗಳನ್ನು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ನಮ್ಮ ರೋಟರಿ ಜಿಲ್ಲೆಯನ್ನು ಅತ್ಯುತ್ತಮ ಜಿಲ್ಲೆಯನ್ನಾಗಿ ಮಾಡಲು ನಿಮ್ಮೆಲ್ಲರ ಸಹಕಾರವನ್ನು ಅಪೇಕ್ಷಿಸುತ್ತೇನೆ. ಜಿಲ್ಲೆಯಲ್ಲಿ ಒಟ್ಟು 87 ಇಂಟರ‍್ಯಾಕ್ಟ್ ಕ್ಲಬ್‌ಗಳನ್ನು ಸ್ಥಾಪಿಸುವುದು ಮತ್ತು 44 ರೋಟರಾಕ್ಟ್ ಕ್ಲಬ್‌ಗಳ ಸ್ಥಾಪನೆ ಮತ್ತು ರೋಟರಿ ಸದಸ್ಯರ ಸಂಖ್ಯೆಯನ್ನು 4500 ಅಂಚಿಗೆ ಕೊಂಡೊಯ್ಯುವುದು ನನ್ನ ಗುರಿಯಾಗಿದೆ. ನಿಮ್ಮೆಲ್ಲರ ಸಹಕಾರವನ್ನು ನಿರೀಕ್ಷಿಸುತ್ತೇನೆ.

**– ರೊ. ಕೆ. ಪಾಲಾಕ್ಷ**
**ಜಿಲ್ಲಾ ಗವರ್ನರ್ 2025–26**



## *Message*

Dear Fellow Rotarians,

I whole heartedly convey my best wishes to the entire team of Rotary Club Shimoga for one more successful Rotary year under the leadership of Rtn. Anand R and his well knitted team. Let us begin the New Year with lot of new hopes and focus on making a tangible difference in the lives of those around us and demonstrate Rotary's commitment to build a Better World.

I look forward to working with you and sharing your club's successes.

Let us UNITE FOR GOOD.

**- Rtn. Jagadeesh Sarja**
Zonal Lieutenant 2025-26



## ಜಿಲ್ಲಾ ಅಸಿಸ್ಟೆಂಟ್ ಗವರ್ನರ್‌ರವರ ಸಂದೇಶ

67 ವರ್ಷಗಳ ಸುಧೀರ್ಘ ಇತಿಹಾಸವುಳ್ಳ ರೋಟರಿ ಕ್ಲಬ್ ಶಿವಮೊಗ್ಗ ರೋಟರಿ ಜಿಲ್ಲೆಯಲ್ಲೇ ವಿಶಿಷ್ಠ ಸ್ಥಾನವನ್ನು ಪಡೆದಿದ್ದು ಹಲವು ಗಣ್ಯಾತಿಗಣ್ಯರನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದೆ. ಸಮಾಜಮುಖಿ ಸೇವೆಯಲ್ಲಿ ಎತ್ತಿದ ಕೈಯಾಗಿರುವ ಈ ಸಂಸ್ಥೆಯನ್ನು ಪ್ರತಿನಿಧಿಸುವ ಸಹಾಯಕ ಗವರ್ನರ್ ಆಗಿ ಸೇವೆ ಸಲ್ಲಿಸುವ ಅವಕಾಶ ಒದಗಿ ಬಂದಿರುವುದು ನನ್ನ ಪಾಲಿನ ಅಮೃತಘಳಿಗೆ.

ರೊ. ಆನಂದ್‌ರವರ ಅಧ್ಯಕ್ಷತೆಯಲ್ಲಿ ಈ ರೋಟರಿ ವರ್ಷದಲ್ಲಿ ಹೊಸ ಮುನ್ನುಡಿ ಬರೆಯಲಿ ಎಂಬುದು ನನ್ನ ಹಾರೈಕೆ.

**– ರೊ. ಕೆ.ಪಿ. ಶೆಟ್ಟಿ**
**ಅಸಿಸ್ಟೆಂಟ್ ಗವರ್ನರ್, 2025–26**



## ಸಂಪಾದಕೀಯ

ರೋಟರಿ ವರ್ಷ 2025–26ರ ವಸಂತನ ಆಗಮನವಾಗುತ್ತಿದೆ. ಚೈತ್ರದ ಚಿಗುರಿನಂತೆ ನಮ್ಮ ಶಿವಮೊಗ್ಗ ರೋಟರಿಯಲ್ಲಿ ರೊ. ಆನಂದ್ ಆರ್. ನೇತೃತ್ವದ ಹೊಸ ತಂಡವು ಹೊಸ ಹುರುಪಿನೊಂದಿಗೆ ನವೋಲ್ಲಾಸದಿಂದ ಪದವಿ ಸ್ವೀಕಾರ ಮಾಡಲು ತಯಾರಾಗಿ ನಿಂತಿದೆ. ಈ ತಂಡವು ವರ್ಷವಿಡೀ ಅರ್ಥಪೂರ್ಣ ಹಾಗೂ ಸಮಾಜ ಮುಖೀ ಕಾರ್ಯಕ್ರಮಗಳನ್ನು ನಡೆಸಲಿ. ತನ್ಮೂಲಕ ಸಮಾಜದ ಕೊನೆಯ ವ್ಯಕ್ತಿಗೂ ರೋಟರಿ ಸೇವೆಗಳು ತಲುಪುವಂತಾಗಲಿ. ಸಮಾಜದ ಎಲ್ಲಾ ಸ್ಥರಗಳ ಅಂದರೆ, ಮಕ್ಕಳು, ವಿದ್ಯಾರ್ಥಿಗಳು, ಯುವಕ–ಯುವತಿಯರು ವೃದ್ಧರು ಎಲ್ಲರಿಗೂ ಅಗತ್ಯವಿರುವ ಹಲವಾರು ಯೋಜನೆಗಳನ್ನು–ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿ. ಅಂಧರು, ಬುದ್ಧಿಮಾಂದ್ಯ ಮಕ್ಕಳು, ಅನಾಥ ಮಕ್ಕಳ ಸೇವಾ ಯೋಜನೆಗಳಿಗೆ ಹೆಚ್ಚು ಮಹತ್ವ ನೀಡಲಿ. ತನ್ಮೂಲಕ ಶಿವಮೊಗ್ಗ ರೋಟರಿ ಕ್ಲಬ್‌ನ ಧ್ಯೇಯವಾಕ್ಯ **'ಸೇವೆಯೇ ಎಲ್ಲಕ್ಕಿಂತ ದೊಡ್ಡದು'** ಎಂಬ ನುಡಿಯನ್ನು ಸಾಕಾರಗೊಳಿಸಲಿ.

ವಿಶ್ವಮಿತ್ರ ಸಂಪಾದಕನಾಗಿ ನಿಮ್ಮೆಲ್ಲ ಸೇವಾಕಾರ್ಯಗಳಿಗೆ ಹೆಗಲು ನೀಡುವ ಭರವಸೆ ನೀಡುತ್ತೇನೆ– ಶುಭವಾಗಲಿ.

**– ರೊ. ಎಂ. ಮಾಧವಾಚಾರ್**



## ಕಾರ್ಯದರ್ಶಿ ನುಡಿ

ರೋಟರಿ ನೂತನ ವರ್ಷ 2025–26 ಆರಂಭವಾಗುತ್ತಿದೆ. ಈ ಸಾಲಿನಲ್ಲಿ ನಮ್ಮ ಶಿವಮೊಗ್ಗ ರೋಟರಿ ಕ್ಲಬ್‌ನ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಲು ಅವಕಾಶ ನೀಡಿದ ಕ್ಲಬ್‌ನ ಎಲ್ಲಾ ಹಿರಿಯರಿಗೂ ಧನ್ಯವಾದಗಳು.

ರೋಟರಿಯ ಕಾರ್ಯಗಳು ಸರಾಗವಾಗಿ ಮತ್ತು ಬಲವಾಗಿ ನಡೆಯಲು ಅಧ್ಯಕ್ಷರೊಂದಿಗೆ ನಾನು ಸಂಪೂರ್ಣವಾಗಿ ಸಹಕರಿಸುತ್ತೇನೆ. ಸಾಮರ್ಥ್ಯ ಮತ್ತು ಸುಧಾರಣೆಗಳನ್ನು ಗುರುತಿಸುವತ್ತ ರೋಟರಿ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡುವಲ್ಲಿ ಸಹಾಯ ಹಸ್ತನಾಗಿರುತ್ತೇನೆ. ಹಾಗೆಯೇ ಇನ್ನು ಹೆಚ್ಚು ಯಶಸ್ಸು ಸಾಧಿಸಲು ಎಲ್ಲಾ ಸದಸ್ಯರುಗಳ ಸಹಕಾರವನ್ನು ಬಯಸುತ್ತಿದ್ದೇನೆ.

**– ರೊ.ವಿಶ್ವಾಸ್ ಯಲಬುರ್ಗಿ**
**ಕಾರ್ಯದರ್ಶಿ 2025–26**

**ಮುಂದಿವಾರ**

**ದಿನಾಂಕ:16-07-2025 ಬುಧವಾರ** **ಸಂಜೆ 6:45ಕ್ಕೆ**

## ಕ್ಲಬ್ ಅಫೇರ್ಸ್

**ವಿಷಯ: ಬಜೆಟ್ ಮಂಡನೆ**

**ಸ್ಥಳ : ರೋಟರಿ ಯುವ ಕೇಂದ್ರ, ಸವಳಂಗ ರಸ್ತೆ, ಶಿವಮೊಗ್ಗ**



# Introduction of Our Chief Guest & Installation Officer

## Rtn. PDG. AVINASH POTDAR

### RI Dist 3170 (2011-12)

**ROTARY PROFILE of Rtn. Avinash Potdar**

Rtn.AVINASH POTDAR, a IIndLevelMajor Donor of The Rotary Foundation; is born in an illustrious family of freedom and social reformers. He is son of SHRI. RAMBHAU POTDAR who was a minister of Government of Karnatakaand then Chairman of Karnataka Legislative Council.

**ROTARY : Rtn.AVINA SHPOTDAR ,** was invited to join Rotary Club of Belgaum in 1983 and for last 42 years, he is serving his Club, Rotary District and community. He was adjudged as the only " BEST CLUB SECRETARY' of the District in 1994-95. He lead his club success fully in1997-98 and wasrecognized with BEST PRESIDENT; BESTCLU Band 6 more awards. The first major donor of the district came from his club during his presidentship along with highest TRF contribution.

**ROTARY :Dist 3170: Rtn. AVINASH,** has served the district as the DCC for Annual Giving TRF; Sportsand Games; Friendship Exchange, Public Relation; Centennial Celebration; Polio Plus; Scholarships and Dist. Resolutions and Governor's Aide. His service was recognized with EXCELLENCE AWARD almost every year. He was GSR for R.C. of Bailhongal. He is the only recipient " BEST ASST. GOVERNOR" award during 2002-03 and collected 22 lacs for Polio Eradication. He was Org. Secretary of the Centennial Conference held at Belgaum. He has been honored with TRF DISTRICT SERVICE AWARD & 4 Avenues of Service citation. He has addressed Rotary; Rotract and Interact forums as Trainer and Keynote Speaker on various occasions. Served asDistrict Governor of R.I. District 3170 in the year2011-12and lead the District successfully. Collected 5,46,000 Dollars (Per capita 102 Dollars) towards Rotary Foundation which is highest then for District 3170 & 9 ½ % membership growth.

* Appointedas Assistant Rotary Public Image Coordinator (ARIPC) Zone Vfor the year 2013- 14 & OSD 3170 for the year 2013-14
* District Trainer 3170 for the year 2014-15,
* ARRFC 2015-16 Dist 3170, 3160 & 3180.
* ARRFC 2016-17 Dist 3170, 3181 & 3182
* Member of nomination committee for R.I. Director 2017-19.
* Entertainment Chair Rotary Literacy Mission 2015, Pune
* Entertainment Chair for Presidential Conference 2016 at Kolkatta
* Regional Polio Awareness Award
* Conferred with Rotary's highest Service Above Self Award
* Served as Facilitator during the Governors Elect Training (GETS) at Dubai, Kualalumpur & Chennai and Indore
* Servedasa Regional Rotary Foundation Coordinator (RRFC), averycoveted post,for Zone V (2017-2020 ).

*Elected from RID 3170for the 2025 Council on Legislation to be held at Chicago from April 13-17, 2025.

Attended : Convention at Bangkok 2012-13& Brazil 2015-16

Instituteat Bangkok, Kolkatta, Hydrabad,Chennai, Jaipur, Dubai Addressed at Hydrabad Institute on Indian Values & Rotary

**SOCIAL PROFILE of Rtn. Avinash Potdar**

Rtn.Avinas his the Former Directorof114 year sold BelgaumPioneerUrbanCo-opbankforlast 32 years and served as the Chairman twice, having achieved profit of more than a crore. He is Instrumental in starting Markandeya Coop Sugar Mills Kakti, Belgaum, A big achievement, which was inaugurated by Former Prime Minister Shri Devegowda in 2019. He is Former Chairman of Markandeya Coop Sugar Mills Kakti, Belgaum and is DirectorofKarnataka State Federation of Coop Sugar Factories. As the President of Belgaum Education Society he is serving the cause of Education.

He has an excellent public relation. Through his personal contacts, he invited Shri. Sunil Dutt, Shri Zakir Hussain; Shri T.N. Sheshan, Shatrughan Sinha, B.S. Chandrashekhar, PrakashPadukone, Brijesh Patel, Atul Kulkarni, Gangubai Hanagal, Sachin Pilgaonkar, Mahesh Kothare, Hon. Shri H D Devegowda on Rotary Platform on various occasions.

**BUSINESS PROFILE of Rtn. Avinash Potdar : Rtn. AVINASH is the owner of SWAROOP (NARTAKI) CINEMA and is associated with various professional ORAGANISATIONS LIKE Belgaum Cine Exhibitors; Karnataka Film Exhibitors and Karnataka Film Chamber of commerce. He has served these organizations as President, vice President and Executive Committee Member. He is the Member, Executive Committee,Cinema Exhibitors & Owners Association of India. For his professional Excellence, he was felicitated at the hands of legendary Shri Rajkapoor, Dr.Rajkumar, Shri. V.Shantaram and Lata Mangeshkar.**

**SPORTS PROFILE of Rtn. Avinash Potdar :** Represented School Cricket Team and was Captain of Lingraj College Cricket Team. He is the Founder President of Belgaum Sports Club through which he organized Ranaji Trophy Matches &1999- 2000 Ranji Match was for Polio awareness and Prepared the first Turf wicket in north Karnataka at Union Gymkhana Belgaum. Conducted one-day Exhibition cum Charity Cricket Match under the leadership of Shri. Sunil Gavaskar. The entire past test cricket players participated in this match. Conducted Ranji Trophy match between Karnataka V/S Andhra Pradesh in 2000 successfully. Conducted under 16 and under 19 Cricket match between Karnataka Vs. Tamilnadu.

His efforts as the Chairman of Karnataka StateCricket Association (Dharwad Zone) resulted in constructing new modern Cricket Stadium at Auto Nagar Belgavi Where in conducted successfully Ranji Trophy matches between

1. Gujarat vs Punjab @ 29..02 November, 2016
2. Gujarat vs Tamil Nadu @ 07..10 November, 2016and
3. Karnataka vs Mumbai from 20th November to 23rd November 2018 at Belagavi

In 2019-20 elected as Convenor of Dharwad Zone of Karnataka State Cricket Association (KSCA) which consists of five (5) Districts Hubli, Belgaum, Karwar, Gadag and Haverifor 3 years.

Conducted six first class matches of BCCI in 2019-20 including UttarpradeshVs. Karnataka Ranji trophy with live telecast. Conducted successfully ThreeT-20 matches between India under 19 Womens Vs. Bangladesh under 19 women team at Belagavi.

Conducted successfully 1st International 4 day unofficial test match between India A V/S.Sri Lanka A, from 25th May to 28th May 2019 and 3 One Day matches on 6thJun 2019, 8thJun 2019 & 10thJun 2019at Belagavi, Conducted successfully 4 day Match between India AVs Newzealand A from 8th September 2022to 11thSeptember 2022 at Hubli.

BCCI appointed AvinashPotdarasMATCH OBSERVERfor 1stT20 Match between India Vs. South Africa held on 29thSeptember 2022 at Trivendrum, Kerala.

He organized a National Level " MR. INDIA ' contest in 2003 & 2025 as the President of Body Builders Association, which was held for the first time in North Karnataka. Conducted a Big Cycle Rally for " Anti-Drug Awareness" in which Shri. Prakash Padukone, former world Badminton Champion took part.More than 5000 school students participated. Awarded as the Best Sports organizer in 1999-2000 by "SANGATI".

He motivated and assisted two physically challenged swimmers to participate in crossing the English Channel who have bestowed Ekalavya Award by Karnataka Government.

Rtn. Avinash Potdar is married to Ann. Rupa who is Past President of Inner Wheel Club of Belgaum. She is a post graduate in Synthetic Drugs and secured Gold Medal from Erstwhile Bombay University.



## ಶುಭ ಹಾರೈಕೆ

**'ಸೇವೆಯೆಂಬ ಯಜ್ಞದಲ್ಲಿ ಸಮಿಧೆಯಂತೆ ಉರಿಯುವಾ'** ಎಂಬ ಕವಿವಾಣಿಯಂತೆ ರೋಟರಿಯ ಸೇವಾಯಜ್ಞದಲ್ಲಿ ವರ್ಷವಿಡೀ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಸಂತೃಪ್ತಿಯನ್ನು ನನ್ನ ಅಧ್ಯಕ್ಷಾವಧಿಯಲ್ಲಿ ನಾನು ಮನದುಂಬಿ ಅನುಭವಿಸಿದ್ದೇನೆ. ನಮ್ಮ ಕ್ಲಬ್ ಸದಸ್ಯರೆಲ್ಲರ ಸಹಕಾರ, ಪ್ರೋತ್ಸಾಹ ನಿರಂತರವಾಗಿ ನಮಗೆ ದೊರಕಿದ್ದರಿಂದ ಕಳೆದ ವರ್ಷವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಸಂಭ್ರಮ ನನಗಿದೆ. ಇದಕ್ಕೆ ಸಹಕರಿಸಿದ ಎಲ್ಲ ಸದಸ್ಯರಿಗೆ ಅನಂತಾನಂತ ಧನ್ಯವಾದಗಳು. ಪ್ರಸಕ್ತ ರೋಟರಿ ವರ್ಷ 2025-26ನೇ ಸಾಲಿಗೆ ಅಧ್ಯಕ್ಷರಾಗಿರುವ ರೊ. ಆನಂದ್ ಆರ್. ಹಾಗೂ ಕಾರ್ಯದರ್ಶಿ ರೊ. ವಿ. ವಿಶ್ವಾಸ್‌ರವರು ಕ್ಲಬ್‌ನ ಕೀರ್ತಿ ಹೆಚ್ಚಿಸುವಂತಹ ಕಾರ್ಯ ಚಟುವಟಿಕೆಗಳನ್ನು ಮಾಡಲಿ ಎಂಬ ಆಶಯದೊಂದಿಗೆ

– ರೊ. ಸೂರ್ಯನಾರಾಯಣ ಉಡುಪ
ಅಧ್ಯಕ್ಷರು, 2024–25



## ಶುಭ ಹಾರೈಕೆ

**'ಸೇವೆಯೇ ಅಮೂಲ್ಯ ಕಾರ್ಯ'**ವೆಂಬ ಆದರ್ಶವನ್ನು ಬೆಳೆಸಿ ಉತ್ತೇಜಿಸುವ ರೋಟರಿಯಲ್ಲಿ ಕಾರ್ಯ ದರ್ಶಿಯಾಗಿ ಸಂತೋಷದಿಂದ ಕೆಲಸ ಮಾಡಿದ ಅವಿಸ್ಮರಣೀಯ ಅನುಭವ ನನ್ನದಾಗಿದೆ. ಅಧ್ಯಕ್ಷರಾಗಿದ್ದ ಸೂರ್ಯನಾರಾಯಣ ಉಡುಪರ ಸ್ನೇಹಪೂರ್ಣ ವ್ಯಕ್ತಿತ್ವ, ಚುರುಕುತನ, ಕ್ರಿಯಾಶೀಲತೆ ಜೊತೆಗೆ ಕ್ಲಬ್‌ನ ಎಲ್ಲ ಸದಸ್ಯರ ಸಹಕಾರ, ಪ್ರೋತ್ಸಾಹ ದೊರಕಿದ್ದು ಎಲ್ಲಾ ಸೇವಾ ಯೋಜನೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಸಂತೃಪ್ತಿ ನನ್ನದಾಗಿದೆ. ಈ ವರ್ಷದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುತ್ತಿರುವ ರೊ. ಆನಂದ್ ಆರ್. ಮತ್ತು ಮತ್ತು ಕಾರ್ಯದರ್ಶಿ ರೊ. ವಿಶ್ವಾಸ್ ವೈ. ರವರು ಅತ್ಯುತ್ತಮ ಕಾರ್ಯಗಳನ್ನು ನಡೆಸುವ ಮೂಲಕ ರೋಟರಿಯ ಕೀರ್ತಿ ಪತಾಕೆಯನ್ನು ಪಸರಿಸಲಿ ಎಂಬ ಶುಭ ಹಾರೈಕೆಯೊಂದಿಗೆ

– ರೊ. ಎನ್. ಜಿ. ಉಷಾ
**ಕಾರ್ಯದರ್ಶಿ, 2024–25**

# Board of Committee For The Year 2025-26

| | |
|---|---|
| Rtn. Anand R. | President |
| Rtn. K. Sooryanarayana Udpa | I.P. President |
| Rtn. Dr. Kanchan Kulakarni | Vice President |
| Rtn. Gopinath N. | President Elect |
| Rtn. Vishwas Y. | Secretary |
| Rtn. Srikanth Nadig | Joint Secretary |
| Rtn. Laxminarayan Bhat | Treasurer |
| Rtn. Veeranna A. Huggi | Club Learning Facilitator |

## DIRECTORS :

| | |
|---|---|
| Rtn. Suneetha Sridhar | Club Service |
| Rtn. Senthil Velan | Vocational Service |
| Rtn. Kishore Sheernaly | Community Service |
| Rtn. H.S. Mohan | International Service |
| Rtn. N.G. Usha | Youth Service |
| Rtn. Nagesh M.V. | District Project |
| Rtn. Manjunath S. | Sergeant at Arms |

## SPECIAL INVITEES :

Rtn. PDG. Dr. R.D. Prabhu
Rtn. PDG. Dr. P. Narayana
Rtn. PAG. S. Dattatri
Rtn. PAG. N.S. Sreedhar
Rtn. PAG. H.D. Udayashankar Shastry

## Chairmen of Permanent Project

Rtn. D.S. Nataraj, Chairman, 75th Anniversary Trust
Rtn. N.S. Sridhar, Chairman, Centenary Trust
Rtn. A. Manjunath, Chairman, Ashakirana




## ಜನ್ಮ ದಿನದ ಶುಭಾಶಯಗಳು



ರೊ. ಹೆಚ್. ಸಿ. ಗಣೇಶ್
1 ನೇ ಜುಲೈ



ರೊ. ವೀರಭದ್ರಪ್ಪ ಎಸ್.ಎಂ.
3 ನೇ ಜುಲೈ



ರೊ. ವಿಜಯ್ ಕುಮಾರ್ ಸಿ.
7 ನೇ ಜುಲೈ



ರೊ. ಲಕ್ಷ್ಮೀನಾರಾಯಣ ಭಟ್
8 ನೇ ಜುಲೈ

## 2025-26 Rotary International President



Francesco Arezzo of Italy selected to be 2025-26 Rotary International President Francesco Arezzo, a member of the Rotary Club of Ragusa, Italy, has been selected by the Board of Directors to become Rotary International's President for 2025-26. Arezzo will become president on 1 July. The Board conducted a special session following the unexpected resignation of RI President-elect Mário César Martins de Camargo on 8 June. Guided by the RI code and policies, the Board selected the new President-elect from a pool of candidates who were considered by the Nominating Committee for President of Rotary International in August 2023.The 2025-26 presidential message, announced at the 2025 Rotary International Assembly in February, will remain Unite for Good, which calls on Rotary members to be a force for unity in a world increasingly divided by politics, geography, and ideology. Through service projects, Rotary brings together people of every background across races, religions, and professions in a shared mission to do good in their communities. Arezzo is an orthodontist in private practice. He is active internationally as a member of the Italian, European, and American orthodontics associations. He is vice president of the National Association of Italian Dentists for the province of Ragusa and was the founder and head for seven years of the delegation for Ragusa of the National Trust for Italy. He is a Knight of Honor and Devotion in Obedience within the Sovereign Order of Malta. A Rotary member for more than 30 years, Arezzo has served as vice chair of the Joint Strategic Planning Committee and as RI director, learning facilitator, and as district conference presidential representative. Arezzo is a Benefactor of The Rotary Foundation. He is married to Anna Maria Criscione, an entrepreneur in the tourism field. They have two children.

### Theme logo for 2025-26

The Rotary International theme for 2025-26 is Unite for Good". This theme encourages Rotary members to foster unity and work together to create positive change in the world. It emphasizes the power of human connection to address global challenges and promote a shared purpose of doing good.

**Here's a more detailed look:**

**Focus on Unity:** The theme highlights Rotary's role in bringing people together across differences in background, religion, and ideology to work towards a common goal.

**Call to Action:** It encourages members to actively participate in service projects and initiatives that contribute to a better world.

**Consistent Messaging:** The theme is intended to be used consistently in all Rotary communications, helping to strengthen the organization's brand and impact.

**Inspiration:** The theme is designed to inspire members, potential members, and partners to join Rotary's mission of service.

**Resources Available:** Rotary provides resources and guidelines for clubs and districts to effectively incorporate the theme into their activities and communications.

# ದಿನಾಂಕ: 02-7-2025, ಬುಧವಾರ ನಡೆದ ರೋಟರಿ ಕ್ಲಬ್ ಶಿವಮೊಗ್ಗದ 2025-26ನೇ ಸಾಲಿನ ನೂತನ ಪದಾಧಿಕಾರಿಗಳ ಪದವಿ ಸ್ವೀಕಾರ ಸಮಾರಂಭ





















## ರೋಟರಿ 3170ರ ಪಿಡಿಜಿ ರೊ. ಅವಿನಾಶ್ ಪೊತ್ದಾರ್ ಇವರಿಂದ 2025-26ನೇ ಸಾಲಿನ ಅಧ್ಯಕ್ಷರಾದ ರೊ. ಆನಂದ್ ಆರ್. ಹಾಗೂ ಕಾರ್ಯದರ್ಶಿ ರೊ. ವಿಶ್ವಾಸ್ ವೈ. ಇವರುಗಳಿಗೆ ಪದವಿ ಪ್ರಧಾನ

ಅಂದು ದಾಖಲೆಯ ಸಂಖ್ಯೆಯಲ್ಲಿ ಆಗಮಿಸಿದ ಸದಸ್ಯರಿಂದೊಡಗೂಡಿದ, ವಿಶೇಷವಾಗಿ ತಳಿರು ತೋರಣಗಳಿಂದ, ಹೂ ಮಾಲೆಗಳಿಂದ ಬಾಗಿಲುಗಳ ಅಲಂಕಾರಗಳಿಂದ, ವೇದಿಕೆಯಲ್ಲಿ ತೂಗೂಯ್ಯಾಲೆಯಲ್ಲಿ ಕುಳಿತ ಗಣಪನ ವಿಗ್ರಹದ ವಿಶೇಷ ಅಲಂಕಾರದಿಂದ ಕಂಗೊಳಿಸಿದ ತುಂಬಿ ತುಳುಕಿದ ಸಭಾಂಗಣದಲ್ಲಿ ಪದಗ್ರಹಣ ಸಮಾರಂಭ ಅತ್ಯಂತ ಅದ್ದೂರಿಯಾಗಿ, ಯಶಸ್ವಿಯಾಗಿ ನಡೆಯಿತು. ವೇದಿಕೆಯ ಕೆಳಭಾಗದ ಪಾರ್ಶ್ವದಲ್ಲಿ ರೊ.ಎನ್.ವಿ.ಭಟ್ ಮತ್ತು ರೊ. ವೀರಣ್ಣ ಎ. ಹುಗ್ಗಿಯವರ ಸಮರ್ಥ ನಿರೂಪಣೆಯೊಂದಿಗೆ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನಡೆಯಿತು.

ವೇದಿಕೆಯಲ್ಲಿ ಮುಖ್ಯಅತಿಥಿಯಾಗಿ ಬೆಳಗಾವಿಯಿಂದ ಆಗಮಿಸಿದ ರೊ.ಪಿಡಿಜಿ. ಅವಿನಾಶ್ ಪೊತ್ದಾರ್ ಮತ್ತು ಅವರ ಧರ್ಮಪತ್ನಿ ಶ್ರೀಮತಿ ರೂಪ ಪೊತ್ದಾರ್‌ರವರೊಂದಿಗೆ 2024-25 ರ ಅಧ್ಯಕ್ಷ ರೊ.ಕೆ. ಸೂರ್ಯನಾರಾಯಣ ಉಡುಪ 2025-26ರ ಅಧ್ಯಕ್ಷ ರೊ. ಆರ್. ಆನಂದ್, 2024-25ರ ಕಾರ್ಯದರ್ಶಿ ರೊ.ಎನ್.ಜಿ. ಉಷಾ, 2025-26 ರ ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿ, ರೊ.ಕೆ.ಪಿ.ಶೆಟ್ಟಿ ಸಹಾಯಕ ಗವರ್ನರ್, ಜೋನಲ್ ಲೆಫ್ಟಿನೆಂಟ್ ರೊ. ಸರ್ಜಾ ಜಗದೀಶ್ ಮುಂತಾದವರಿದ್ದರು.

ರೊ.ವನಿತಾ ಸಂದೀಪ್‌ರವರಿಂದ ಪ್ರಾರ್ಥನೆ. 2026-27 ನೇ ನಿಯೋಜಿತ ಅಧ್ಯಕ್ಷ ರೊ.ಎನ್. ಗೋಪಿನಾಥ್‌ರವರಿಂದ ಸ್ವಾಗತ. ಕಾರ್ಯಕ್ರಮದ ಉದ್ಘಾಟನೆಯನ್ನು ದೀಪ ಬೆಳಗುವುದರ ಮೂಲಕ ಮುಖ್ಯ ಅತಿಥಿಗಳು ಮತ್ತಿತರು ನೆರವೇರಿಸಿದರು. ಹಿನ್ನೆಲೆಯಲ್ಲಿ ರೊ.ರಮಾಗೋಪಾಲ್, ರೊ.ಸುಮಲತಾ ಭೂಪಾಳಂ, ರೊ.ಅನುರಾಧ ಶೀರನಾಳಿ, ರೊ.ಭಾರ್ಗವಿ ಭಟ್,ರೊ.ವನಿತಾ ಸಂದೀಪ್‌ರವರು 'ಶುಭ ಕರೋತಿ ಕಲ್ಯಾಣಂ' ಸಮೂಹ ಗೀತೆಯನ್ನು ಹಾಡಿದೀಪ ಪ್ರಜ್ವಲಕ್ಕೆ ಮೆರುಗುತಂದರು. ರೊ. ಶ್ರೀಕಾಂತ್ ನಾಡಿಗ್‌ರವರು ಕಾರ್ಯಕ್ರಮಕ್ಕೆ ಗೌರವಾನ್ವಿತರಿಂದ ಬಂದ ಸಂದೇಶಗಳನ್ನು ಓದಿದರು. ರೊ.ಸಿ. ವಿಜಯಕುಮಾರ್‌ರವರು ಹುಟ್ಟುಹಬ್ಬದ ಶುಭಾಶಯ ಕೋರಿದರು.

ರೊ. ಕಿಶೋರ್ ಶೀರನಾಳಿಯವರು ಮುಖ್ಯಅತಿಥಿ ರೊ. ಪಿಡಿಜಿ. ಅವಿನಾಶ್ ಪೊತ್ದಾರ್‌ರವರ ಪರಿಚಯ ಮಾಡಿದರು. ರೊ. ಹೆಚ್.ಎಸ್. ಮೋಹನ್‌ರವರು ಸಹಾಯಕ ಗವರ್ನರ್ ರೊ.ಕೆ.ಪಿ. ಶೆಟ್ಟಿ ಮತ್ತು ಲೆಫ್ಟಿನೆಂಟ್ ರೊ.ಜಗದೀಶ ಸರ್ಜಾರವರನ್ನು ಸಭೆಗೆ ಪರಿಚಯಿಸಿದರು.




ರೋಟರಿ ಕ್ಲಬ್ ಶಿವಮೊಗ್ಗ 2025–26 ರ ನೂತನ ಪದಾದಿಕಾರಿಗಳು




ಪ್ರತಿಭಾ ಪುರಸ್ಕಾರ




ಪ್ರತಿಭಾ ಪುರಸ್ಕಾರ




ನೂತನ ಸದಸ್ಯರುಗಳ ಸೇರ್ಪಡೆ




ರೋಟರಿ ಕ್ಲಬ್ ಶಿವಮೊಗ್ಗದ ವಿಶ್ವಮಿತ್ರ ಬುಲೆಟಿನ್ ಬಿಡುಗಡೆ




ಸಹಾಯಕ ಗವರ್ನರ್ ರೊ. ಕೆ.ಪಿ. ಶೆಟ್ಟಿರವರಿಂದ ಹಿತನುಡಿ




ಝೋನಲ್ ಲೆಫ್ಟಿನೆಂಟ್ ರೊ. ಜಗದೀಶ್ ಸರ್ಜಾರವರಿಂದ ಹಿತನುಡಿ




ಮುಖ್ಯ ಅತಿಥಿ ರೊ. ಅವಿನಾಶ್ ಪೋತ್ದಾರ್‌ರವರಿಂದ ಹಿತನುಡಿ

ಪದವಿ ಸ್ವೀಕರಿಸಿದ ನೂತನ ಅಧ್ಯಕ್ಷ ರೊ.ಆರ್.ಆನಂದರವರು ಆರಂಭದಲ್ಲಿ ಮಂತ್ರೋಚ್ಚಾರಣೆ ಮಾಡಿ, ಗುರುರಾಯರನ್ನು ಶ್ರೀಕೃಷ್ಣನನ್ನು ನೆನೆದು ತಮ್ಮ ಮಾತನ್ನು ಆರಂಭಿಸಿದರು. 365 ದಿನಗಳು ರೋಟರಿಯನ್ನೇ ಉಸಿರಾಡಿ, 108 ಕಾರ್ಯಕ್ರಮಗಳನ್ನು ರೊ.ಕೆ.ಸೂರ್ಯನಾರಾಯಣ ಉಡುಪರು ಮತ್ತು ರೊ.ಎನ್.ಜಿ. ಉಷಾ ದಂಪತಿಗಳು ನಡೆಸಿದ್ದಾರೆ ಎಂದು ಸ್ಮರಿಸಿ ಅವರಿಗೆ ವಂದನೆಗಳನ್ನು ತಿಳಿಸಿದರು. ತಮ್ಮ ರೋಟರಿಯ ಹಾದಿಯನ್ನು ವಿವರಿಸುತ್ತಾ, 2016 ರಲ್ಲಿ ರೋಟರಿಗೆ ಸೇರಿದೆ. 2017 ರಲ್ಲಿ ಸಕ್ರಿಯನಾದೆ. ಇದೊಂದು ಶಿಸ್ತಿನ ಸಂಸ್ಥೆ. ಒಂದು ಚೌಕಟ್ಟಿನಲ್ಲಿ ಕೆಲಸ ಮಾಡಬೇಕು ಎಂದು ತಿಳಿದುಕೊಂಡೆ. 2020ರಲ್ಲಿ ಕ್ಲಬ್ ಸರ್ವಿಸ್ ನಿರ್ದೇಶಕನಾದೆ. 2021 ರಲ್ಲಿ ರೊ.ಕಿಶೋರ್ ಶೀರನಾಳಿ ಅಧ್ಯಕ್ಷಾವಧಿಯಲ್ಲಿ ಕಾರ್ಯದರ್ಶಿಯಾಗಿದ್ದೆ. ಆಗ ಸಂಸ್ಥೆಯ ಬಗ್ಗೆ ಹೆಚ್ಚು ಅರಿವಾಯಿತು. ಆದರೆ ಆಗ ಕೋವಿಡ್ ಸಮಯವಾದರೂ ಹಲವಾರು ಕಾರ್ಯಕ್ರಮಗಳಾದವು. ಅಲ್ಲಿಂದ ರೋಟರಿಯನ್ನು ಹೆಚ್ಚು ಗಂಭೀರವಾಗಿ ತೆಗೆದುಕೊಂಡು ಕಾರ್ಯ ನಿರ್ವಹಿಸಿದೆ. ಜೊತೆಗೆ ಜಿಲ್ಲಾ ಸಮ್ಮೇಳನದ ರಿಜಿಸ್ಟ್ರೇಶನ್ ಕಮಿಟಿಯಲ್ಲಿ ಕೆಲಸ ಮಾಡಿದ್ದು ಹೆಚ್ಚಿನ ಅನುಭವ ಹಾಗೂ ರೋಟರಿಯ ಸದಸ್ಯರ ಮತ್ತು ಜಿಲ್ಲಾ ಮಟ್ಟದಲ್ಲಿ ಹಲವಾರು ಗೌರವಾನ್ವಿತ ಸದಸ್ಯರ ಪರಿಚಯವಾಯಿತು. ರೊ.ಪಿಡಿಜಿ. ಡಾ.ಪಿ.ನಾರಾಯಣ ಮತ್ತಿತರರ ಒತ್ತಾಸೆಯ ಮೇರೆಗೆ ಈಗ ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸಿದ್ದೇನೆ. ಇದೇ ಸಂದರ್ಭದಲ್ಲಿ ರೋಟರಿ ನೂತನ ವರ್ಷದ ನೂತನ ಫ್ಲಾಗ್‌ನ್ನು ಅನಾವರಣಗೊಳಿಸಿದರು.

68 ವರ್ಷಗಳ ಇತಿಹಾಸವಿರುವ ರೋಟರಿ ಸಂಸ್ಥೆಯ ವಿಶೇಷವಾದ ಅಧ್ಯಕ್ಷರ ಕುರ್ಚಿಗೆ ಅದರದೇ ಆದ ಇತಿಹಾಸವಿದೆ. 1958ರಲ್ಲಿ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರಿಂದ ಉದ್ಘಾಟಿಸಲ್ಪಟ್ಟ ಈ ಕ್ಲಬ್‌ನ ಆ ವಿಶೇಷ ಅಧ್ಯಕ್ಷರ ಕುರ್ಚಿಯಲ್ಲಿ ಅವರು ಕುಳಿತಿದ್ದುದು ವಿಶೇಷ. ಅದರಿಂದಲೇ ಅದಕ್ಕೊಂದು ವಿಶೇಷತೆಯೊದಗಿದೆ. ಅದು ವಿಕ್ರಮಾದಿತ್ಯನ ಸಿಂಹಾಸನದಂತೆ ಇದ್ದು ಅದರಲ್ಲಿ ಕೂರುವ ಅವಕಾಶ ಒದಗಿ ಬಂದಿರುವುದು ನನ್ನ ಸೌಭಾಗ್ಯ ಎಂದು ಪರಿಭಾವಿಸುವೆ. ಆ ಆಸನ ಎಲ್ಲ ಕಾರ್ಯವನ್ನೂ ಮಾಡಿಸುತ್ತದೆ. ಕ್ಲಬ್‌ನಲ್ಲಿ 119 ಜನ ಸದಸ್ಯರಿದ್ದಾರೆ. ಮಾಜಿ ಗವರ್ನರ್‌ಗಳಿದ್ದಾರೆ. 45–46 ವಯೋಮಾನದ ಅಧ್ಯಕ್ಷ ಕಾರ್ಯದರ್ಶಿಗಳಿದ್ದೇವೆ. ದೊಡ್ಡದಾದ ಹಿರಿದಾದ ಕ್ಲಬ್ ಇದಾಗಿದ್ದು, ಅದನ್ನು ನಿರ್ವಹಣೆ ಮಾಡುವುದು ಮತ್ತು ಸದಸ್ಯರನ್ನು ಉಳಿಸಿಕೊಳ್ಳುವುದು ತ್ರಾಸದಾಯಕವಾದ ಕೆಲಸ ಎಂದರು. 14 ಇಂಟರಾಕ್ಟ್ ಕ್ಲಬ್ ಇದೆ. ರೋಟರಾಕ್ಟ್, ಆರ್.ಸಿ.ಸಿ. ಇದೆ. ಅವೆಲ್ಲವೂ ನಿರ್ವಹಣೆಯಾಗಬೇಕು ಎಂದು ತಿಳಿದರಲ್ಲದೇ ತಮ್ಮ ಅವಧಿಯಲ್ಲಿ ಯೋಜನೆ ಮಾಡಿರುವ ಈ ಕೆಳಕಂಡ ಕಾರ್ಯಗಳ ಬಗ್ಗೆ ತಿಳಿಸಿದರು. ಅದಕ್ಕಾಗಿಎಲ್ಲರ ಸಹಕಾರ ಕೋರಿದರು.

ಈ ವರ್ಷದ ನನ್ನ ಅವಧಿಯಲ್ಲಿ ಎಲ್ಲಾ ಸದಸ್ಯರೂ ಒಂದುಗೂಡಿ ಈ ಕೆಳಕಂಡಂತೆ ಉತ್ತಮವಾದ ಸಮಾಜ ಮುಖಿ ಕಾರ್ಯಗಳನ್ನು ಮಾಡಲು ಉದ್ದೇಶಿಸಿದ್ದೇವೆ ಎಂದು ತಿಳಿಸುತ್ತಾ

**ಜಿಲ್ಲಾ ಕಾರ್ಯಕ್ರಮಗಳಾದ –**

* ಪರಿಸರರಕ್ಷಣೆ * ಪ್ಲಾಸ್ಟಿಕ್ ಮುಕ್ತ ಜೀವನಶೈಲಿ ಅಳವಡಿಸಿಕೊಳ್ಳಲು ಅರಿವು ಮೂಡಿಸುವ ಕಾರ್ಯಕ್ರಮ, Kitchen Waste Management - & Comfort – ಗೃಹ ಬಳಕೆ ತ್ಯಾಜ್ಯಗಳ ಸಂಸ್ಕರಣೆ ಮತ್ತು ಗೊಬ್ಬರ ತಯಾರಿಸುವ ಬಗ್ಗೆ * ಎಲೆಕ್ಟ್ರಾನಿಕ್ ತ್ಯಾಜ್ಯಗಳ ಸುಸೂತ್ರ ವಿಲೇವಾರಿ * ಸಸಿ ನೆಡುವ ಕಾರ್ಯಕ್ರಮ, ಕೆರೆಗಳ ಅಭಿವೃದ್ಧಿ * ರೋಟರಿ ಜೀವ ವೈವಿಧ್ಯ, ಅರಣ್ಯ ಸಂರಕ್ಷಣೆ * ಆರೋಗ್ಯ ತಪಾಸಣಾ ಶಿಬಿರಗಳು ಮತ್ತು ರಕ್ತದಾನ ಶಿಬಿರಗಳು * ಬಡ ವಿದ್ಯಾರ್ಥಿಗಳಿಗೆ ಶಿಕ್ಷಣದ ಸಲುವಾಗಿ ಪುಸ್ತಕ ಮತ್ತು ಇತರ ಅಗತ್ಯ ವಸ್ತುಗಳ ಸಹಾಯ.

ಪರಿಸರ ಸ್ನೇಹಿ ಉಡುಗೊರೆಗಳು * ಸಾಮಾಜಿಕ ಪಿಡುಗುಗಳಾದ ಡ್ರಗ್ಸ್ ಸೇವನೆ, ಪಾನ್‌ಗುಟ್ಕಾ, ತಂಬಾಕು ಇತ್ಯಾದಿಗಳಿಂದ ಆಗುವ ಹಾನಿ ಕುರಿತು ಅರಿವು ಮೂಡಿಸುವುದು.

* ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣಗಳನ್ನು ಅಳವಡಿಸಿಕೊಳ್ಳುವ ಕುರಿತು ಕಾರ್ಯಾಗಾರ.

* ಪರೀಕ್ಷೆ ಎದುರಿಸುವ ಬಗ್ಗೆ ಮತ್ತು ಆಧ್ಯಯನ ಶೈಲಿಯನ್ನು ಅಳವಡಿಸಿಕೊಳ್ಳುವ ಬಗ್ಗೆ ಕಾರ್ಯಾಗಾರ.

* ಕ್ಲಬ್‌ನಿಂದ ಪ್ರಾಯೋಜಿಸಲ್ಪಟ್ಟ 14 ಇಂಟರಾಕ್ಟ್ ಕ್ಲಬ್, 1 ರೋಟರಾಕ್ಟ್ ಕ್ಲಬ್ ಮತ್ತು ಆರ್.ಸಿ.ಸಿ.ಯಿಂದ ಹಮ್ಮಿಕೊಳ್ಳುವ ಸಮಾಜ ಮುಖಿ ಕಾರ್ಯಗಳಿಗೆ ಪ್ರೋತ್ಸಾಹ.

* ಆಡಂಬರ ಜೀವನ ಶೈಲಿಯಿಂದ ಸರಳ ಜೀವನ ಶೈಲಿಯತ್ತ ಗಮನ ಹರಿಸುವುದು.

ಇತ್ಯಾದಿ ಕಾರ್ಯಕ್ರಮಗಳನ್ನು ಮತ್ತು ಗ್ಲೋಬಲ್ ಗ್ರಾಂಟ್ ಅಡಿಯಲ್ಲಿ ಪ್ರಾಜೆಕ್ಟ್ ಮಾಡುವ ಉದ್ದೇಶ ಹೊಂದಲಾಗಿದೆ ಎಂದು ತಿಳಿಸಿ

ತಮ್ಮ ನೂತನ ತಂಡವನ್ನು ಪರಿಚಯಿಸಿದರು. ರೊ. ಕೆ.ಸೂರ್ಯನಾರಾಯಣ ಉಡುಪ, ರೊ.ಡಾ. ಕಾಂಚನ್ ಕುಲಕರ್ಣಿ ರೊ.ವಿಶ್ವಾಸ್ ಎಲಬುರ್ಗಿ, ರೊ.ಶ್ರೀಕಾಂತ್ ನಾಡಿಗ್, ರೊ. ಲಕ್ಷ್ಮೀನಾರಾಯಣ ಭಟ್, ರೊ.ಎಸ್. ಮಂಜುನಾಥ್, ರೊ.ಸುನಿತಾ ಶ್ರೀಧರ್ ರೊ.ಸೆಂಥಿಲ್ ವೇಲನ್ ರೊ.ಕಿಶೋರ್ ಶೀರನಾಳಿ, ರೊ.ಹೆಚ್.ಎಸ್. ಮೋಹನ್ ರೊ.ಎನ್.ಜಿ. ಉಷಾ ರೊ.ನಾಗೇಶ್ ಎಂ.ವಿ. ರೊ.ವೀರಣ್ಣ ಎ. ಹುಗ್ಗಿ ರೊ.ಮಂಜುನಾಥ್‌ಎಸ್. ಮುಂತಾದವರಿಗೆ ಅವರವರ ಹುದ್ದೆಗಳಿಗನುಗುಣವಾಗಿ ಪಿನ್‌ಗಳನ್ನು ತೊಡಿಸಿ ಹಸ್ತಾಂತರ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದರು.

**ನೂತನ ಸದಸ್ಯರ ಸೇರ್ಪಡೆ:** ರೊ.ಎನ್.ವಿ.ಭಟ್‌ರವರು ನಮ್ಮ ಕ್ಲಬ್‌ಗೆ ನೂತನ ಸದಸ್ಯರ ಸೇರ್ಪಡೆಗೊಳಿಸಲು ಅನುವು ಮಾಡಿದರು. ಈ ಕೆಳಕಂಡವರು ನೂತನ ಸದಸ್ಯರಾಗಿ ಮುಖ್ಯ ಅತಿಥಿಗಳಾದ ರೊ.ಪಿಡಿಜಿ. ಅವಿನಾಶ್ ಪೊತ್ದಾರ್‌ರವರಿಂದ ಪಿನ್ ಮತ್ತು ಸಂಸ್ಥೆಯ ವಿವರಗಳ ಹೊತ್ತಿಗೆ ಪಡೆಯುವುದರ ಮೂಲಕ ರೋಟರಿಗೆ ಸೇರ್ಪಡೆಯಾದರು. ಮಹಮ್ಮದ್ ಇಬ್ರಾಹಿಂ, ಸಹಾಯಕ ಪ್ರೊಫೆಸರ್, ಜವಹರಲಾಲ್ ನೆಹರು ಇಂಜಿನಿಯರಿಂಗ್ ಕಾಲೇಜು, ಶ್ರೀಮತಿ ಲಕ್ಷ್ಮೀ ಆನಂದ್, ಶ್ರೀಮತಿ ಅಶ್ವಿನಿ ಎಂ.ಎಂ. ಹಾಗೂ ಗೌರವ ಸದಸ್ಯರಾಗಿ ಶ್ರೀ ಚನ್ನಬಸಪ್ಪ, ಉಪ ಸಂಪಾದಕರು ಶಿವಮೊಗ್ಗ ಟೈಮ್ಸ್ ಇವರುಗಳು ಸೇರ್ಪಡೆಯಾದರು.

ಇದೇ ಸಂದರ್ಭದಲ್ಲಿ ಪ್ರತೀವರ್ಷದಂತೆ ಸ್ಕಾಲರ್ ಶಿಪ್‌ಗಳನ್ನು ವಿತರಿಸಲಾಯಿತು. ರೊ. ನೀತು ದೀಪಕ್‌ರವರು ವಿದ್ಯಾರ್ಥಿಗಳ ಹೆಸರುಗಳನ್ನು ಓದಿದರು. ರೊ.ಡಿ.ಎಸ್. ನಟರಾಜ್, ರೊ. ವೈ.ವಿ. ವೆಂಕಟರಮಣ ಜೋಯ್ಸ್‌ರವರು ರೊ.ಎ.ಮಂಜುನಾಥರವರು ವಿದ್ಯಾರ್ಥಿಗಳಿಗೆ ಸ್ಕಾಲರ್ ಶಿಪ್ ಸರ್ಟಿಫಿಕೇಟ್ ವಿತರಣೆ ಮಾಡಿ ಶುಭ ಹಾರೈಸಿದರು.

**ವಿಶ್ವಮಿತ್ರದ ವಿಶೇಷ ಸಂಚಿಕೆ ಬಿಡುಗಡೆ:** ವಲಯ 10ರ ಸಹಾಯಕ ಗವರ್ನರ್ ರೊ. ಕೆ.ಪಿ.ಶೆಟ್ಟಿಯವರು ವಿಶ್ವಮಿತ್ರದ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಸಂಪಾದಕರಾದ ರೊ. ಮಾಧವಾಚಾರ್‌ರವರು ಸಹಕರಿಸಿದರು.

ವಲಯ ಸೇನಾನಿ ರೊ.ಸರ್ಜಾ ಜಗದೀಶ್‌ರವರು ಕ್ಲಬ್‌ನ ಬಗ್ಗೆ ಕ್ಲಬ್‌ನಲ್ಲಿರುವ ಸ್ನೇಹಿತರುಗಳ ಬಗ್ಗೆ ಮಾತನಾಡಿ ಉತ್ತಮ ಒಡನಾಟವನ್ನು ಕೊಟ್ಟಿರುವ ಕ್ಲಬ್ ಎನ್ನುತ್ತ ನೂತನ ತಂಡಕ್ಕೆ ಶುಭ ಹಾರೈಸಿದರು. ಸಹಾಯಕ















ಗವರ್ನರ್ ರೊ.ಕೆ.ಪಿ.ಶೆಟ್ಟಿಯವರು ತಮ್ಮದೇ ಆದ ಶೈಲಿಯಲ್ಲಿ ಮಾತನಾಡುತ್ತಾ, ಕೇಟ್ ತಂಡಕ್ಕೆ ಹೋಲಿಸುತ್ತಾ ಕ್ಲಬ್ ಉತ್ತಮ ಕಾರ್ಯಗಳನ್ನು ಮಾಡಲಿ ಎಂದು ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ರೊ.ಪಿಡಿಜಿ. ಅವಿನಾಶ್ ಪೋತ್ದಾರ್‌ರವರು ತಮ್ಮ ಮಾತನ್ನು ಕ್ರಿಕೇಟ್ ಮತ್ತು ಸಿನಿಮಾ ನಟರುಗಳ ಹಲವಾರು ಉದಾಹರಣೆಗಳನ್ನು ನೀಡುತ್ತಾ ಮಾತನಾಡಿದರು. ಯಾವುದೇ ಸದಸ್ಯರಾದರೂ ಅವರಲ್ಲಿ ಉತ್ತಮ ಗುಣಗಳು, ವಿಶೇಷತೆಗಳು ಇರುತ್ತವೆ. ಅದನ್ನು ಗುರುತಿಸಿ, ಪ್ರೋತ್ಸಾಹ ನೀಡಿ, ಅವರಿಂದ ಕೆಲಸಗಳನ್ನು ಮಾಡಿಸಿದಲ್ಲಿ ಅವರು ಉತ್ತಮ ನಾಯಕರಾಗುವುದರಲ್ಲಿ ಸಂಶಯವಿಲ್ಲ ಎಂದರು. ಹಳೆಯ ಹಿಂದಿ ಸಿನಿಮಾದ ಪೃಥ್ವಿರಾಜ್ ಕಪೂರ್ ಮತ್ತು ರಾಜ್‌ಕಪೂರ್, ಕ್ರಿಕೇಟ್‌ನ ಕೂಲ್‌ಕ್ಯಾಪ್ಟನ್ ಧೋನಿಯವರುಗಳ ಉದಾಹರಣೆಯನ್ನು ಅವರುಗಳ ಯಶೋಗಾಥೆಯನ್ನು ವಿವರಿಸಿದರು. ಅಲ್ಲದೇ ನಮ್ಮ ಕ್ಲಬ್‌ನ ಕಾರ್ಯವೈಖರಿಗಳ ಬಗ್ಗೆ ಮತ್ತು ಮುಂಬರುವ ದಿನಗಳಲ್ಲಿ ಹಮ್ಮಿಕೊಳ್ಳಬೇಕಾದ ಕಾರ್ಯಗಳ ಬಗ್ಗೆ ವಿವರಿಸಿದರು. ತಮ್ಮ ಅನುಭವೀ ಮಾತುಗಳಿಂದ ನೂತನ ಪದಾಧಿಕಾರಿಗಳಿಗೆ ಹಲವಾರು ವಿಷಯಗಳನ್ನು ತಿಳಿಸಿದರು.

ಇವರಿಗೆ ಕ್ಲಬ್‌ನ ವತಿಯಿಂದ ಗೌರವಾರ್ಪಣೆಯಾಯಿತು. ಕೊನೆಯಲ್ಲಿ ನೂತನ ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ವಂದನಾರ್ಪಣೆ ಮಾಡಿದರು. ನಂತರ ಸುಗ್ರಾಸ ಭೋಜನದಲ್ಲಿ ಎಲ್ಲರೂ ಪಾಲ್ಗೊಂಡರು.